ದೇವರು ಅನ್ಯ ಜನರನ್ನು ನಂಬಿಕೆಯ ನಿಮಿತ್ತವಾಗಿಯೇ ನೀತಿವಂತರೆಂದು ನಿರ್ಣಯಿಸುವನು.
— ಗಲಾತ್ಯ 3:8.

## ದೇವರ ವಾಗ್ದಾನಗಳು.

(ಹಿಂದಿನ ಸಂಚಿಕೆಯಿಂದ)

ಪ್ರವಾದಿಯಾದ ಓಬದ್ಯನು ಇಸ್ರಾಯೇಲಿನ ಮುಂದಣ ಪ್ರಾಬಲ್ಯದ ಬಗ್ಗೆ ತಿಳಿಸುತ್ತಾ, ''ಯಾಕೋಬನ ವಂಶವು ಅಗ್ನಿ, ಯೋಸೇಫನ ವಂಶವು ಜ್ವಾಲೆ.... ಆ ಅಗ್ನಿ ಜ್ವಾಲೆಗಳು ಕೂಳೆಯಲ್ಲಿ ಧಗಧಗಿಸುತ್ತಾ ಅದನ್ನು ನುಂಗಿ ಬಿಡುವವು....ಕಾನಾನ್ಯರ ದೇಶವನ್ನು ಚಾರೆಪತಿನ ವರೆಗೆ ತಮ್ಮದಾಗಿ ಮಾಡಿ ಕೊಳ್ಳುವರು....ರಕ್ಷಕರು ಚೀಯೋನ ಪರ್ವತದಲ್ಲಿ ಏರಿ ಏಸಾವಿನ ಪರ್ವತವನ್ನು ಆಳುವರು; ಆಗ ರಾಜ್ಯವು ಯೆಹೋವನದಾಗಿರುತ್ತದೆ...'' (17–21). ಇದು ಯಾವಾಗ ಸಂಭವಿಸುವಂಥದ್ದು? ಯಾಕೋಬನ ವಂಶವು ಇಷ್ಟು ಪ್ರಬಲವಾಗುವುದು ಯಾವಾಗ? ಈಗ ಆಗಿದೆಯೇ? ಇಲ್ಲ. ಇನ್ನೂ ಆಗಬೇಕಾಗಿದೆ. ಮೀಕನ ಪ್ರವಾದನೆಯಲ್ಲಿ ನೋಡಿ, ''ಯೆಹೋವನು ಚೀಯೋನ ಪರ್ವತದಲ್ಲಿ ಇಂದಿನಿಂದ ಅವರ ರಾಜನಾಗಿರುವನು....'' (4:6–8). ಯೆಹೋವನು ರಾಜನಾಗಿರುವುದು ಯಾವಾಗ? ತಾನು ಪಿತೃಗಳಿಗೆ ಮಾಡಿದ ವಾಗ್ದಾನಗಳನ್ನು ನೆರವೇರಿಸುವಾಗ ಈ ಪ್ರವಾದನೆಗಳು ನೆರವೇರುತ್ತವೆ. ದೇವರು ಮೋಶೆಯ ಮುಖಾಂತರ ಇಸ್ರಾಯೇಲ್ಯರಿಗೆ ಆಜ್ಞಾಪಿಸಿದ್ದೇನೆಂದರೆ — ಅವರು ತಮ್ಮ ಅವಿಧೇಯತ್ವಕ್ಕೆ ಪಶ್ಚಾತ್ತಾಪ ಪಟ್ಟು, ದೇವರ ಆಜ್ಞೆಗೆ ವಿಧೇಯರಾಗುವವರಾದರೆ, ಯೆಹೋವನು ಪಿತೃಗಳಿಗೆ ಮಾಡಿದ ವಾಗ್ದಾನಗಳನ್ನು ಜ್ಞಾಪಕಕ್ಕೆ ತಂದುಕೊಂಡು ನೆರವೇರಿಸುತ್ತಾನೆ. ಅವರ ಸ್ವದೇಶವನ್ನೂ ಆತನು ಜ್ಞಾಪಕಕ್ಕೆ ತಂದುಕೊಳ್ಳುತ್ತಾನೆ. (ಯಾಜ.ಕಾ.26:42). ''ಅದು ನಿಮ್ಮ ದೇವರಾದ ಯೆಹೋವನು ಪರಾಂಬರಿಸುವ ದೇಶ; ಸಂವತ್ಸರದ ಪ್ರಾರಂಭ ಮೊದಲುಗೊಂಡು ಕೊನೆಯವರೆಗೂ ಆತನು ಅದನ್ನು ಕಟಾಕ್ಷಿಸುವನು'' (ಧ.ಕಾ. 11:12). ಆಗ ಆ ರಾಜ್ಯವು ಹೇಗಿರುತ್ತದೆಂದು ಯೆಹೆಜ್ಕೇಲನು ವರ್ಣಿಸುತ್ತಾನೆ. ''ಏದೆನ ಉದ್ಯಾನದಂತೆ ಕಳಕಳಿಸುತ್ತದೆ.... ಹಬ್ಬಗಳಲ್ಲಿ ಯೆರೂಸಲೇಮಿಗೆ ಬಂದು ನೆರೆಯುವ ಹಿಂಡಿನ ಹಾಗೆ ಮನುಷ್ಯರು ಹಾಳು ಪಟ್ಟಣಗಳಲ್ಲಿ ಹಿಂಡುಹಿಂಡಾಗಿ ತುಂಬಿಕೊಳ್ಳುವರು....'' (ಯೆಹೆಜ್ಕೇಲ 36:34–38; ಯೆಶಾಯ 51:3).

ಸತ್ಯವೇದದಲ್ಲಿ ಈ ವಾಗ್ದಾನಗಳನ್ನು ನಾವು ಓದುವಾಗ, ನಮ್ಮ ಪಿತೃಗಳು ಪ್ರವಾಸಿಗಳಾಗಿ ಅಲೆದಾಡಿದ ದೇಶವನ್ನು ಅವರಿಗೆ ಸ್ವಾಸ್ತ್ಯವಾಗಿ ಕೊಡುತ್ತೇನೆಂದು ಯೆಹೋವನು ವಾಗ್ದಾನ ಮಾಡಿದನೆಂಬುದಾಗಿ ತಿಳಿಯುತ್ತೇವೆ. ಅನೇಕರು ತಿಳಿದಿರುವಂತೆ ಅದು ಪರಲೋಕದಲ್ಲಿಲ್ಲ. ಪರಲೋಕದಂಥ ರಾಜ್ಯ. ಪರಲೋಕಕ್ಕೂ ಪರಲೋಕರಾಜ್ಯಕ್ಕೂ ವ್ಯತ್ಯಾಸವನ್ನು ನಾವು ಸರಿಯಾಗಿ ಅರಿತು ಕೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮ ನಿರೀಕ್ಷೆಯೇ ಸುಳ್ಳಾಗುತ್ತದೆ. ಕ್ರಿಸ್ತನು ದಾವೀದನ ರಾಜ್ಯವನ್ನು ಪುನಃ ಸ್ಥಾಪಿಸಿ, ಭೂಲೋಕಕ್ಕೆಲ್ಲಾ ತಾವತಿ ಅರಸನಾಗಿ ಅದರಲ್ಲಿ ಆಳಿಕೆ ನಡೆಸುವಾಗ, ಪ್ಯಾಲೆಸ್ತೀನ ದೇಶವು ಪರಲೋಕದಂಥ ದೇಶವಾಗುತ್ತದೆ. ಮತ್ತು ಯಾವ ದುಷ್ಟ ಹಾಗೂ ಕ್ರೂರ ದಂಗೆಕೋರರಿಂದಲೂ ಅಲುಗಾಡಿಸಲಾಗದಂಥ ಒಂದು ಬಂಡೆಯ ಮೇಲೆ ಅದು ನಿಂತಿರುತ್ತದೆ. ಆತನ ರಾಜ್ಯವು ಬಲವಾದ ಅಸ್ತಿವಾರ ಇರುವ ಒಂದು ಪಟ್ಟಣವಾಗಿರುತ್ತದೆ.

ಈ ವಾಗ್ದಾನಗಳಲ್ಲಿ ಅಬ್ರಹಾಮನೊಂದಿಗೆ ಅವನ ಸಂತಾನವೂ ಸೇರಿರುತ್ತದೆಂಬುದನ್ನು ನಾವು ಗಮನಿಸಬಹುದು. ಶ್ರೀ ಪೌಲನು, ''ಈ ಸಂತತಿಯು ಕ್ರಿಸ್ತನೂ ಮತ್ತು ಯಾರು ಕ್ರಿಸ್ತನವರಾಗಿರುತ್ತಾರೋ ಅವರೆಲ್ಲರೂ'' ಎಂದು ಹೇಳುತ್ತಾನೆ (ಗಲಾತ್ಯ 3:16,29).

ಕ್ರಿಸ್ತನ ಮತ್ತು ಆತನ ಜನರಿಂದ ಮಾನವ ಕುಲವನ್ನು ಆಳಬೇಕೆಂಬುದು ದೇವರ ಉದ್ದೇಶವಾಗಿದ್ದಲ್ಲಿ, ಅವರು ತಮ್ಮ ಕಾರ್ಯಾಚರಣೆಗೆ ಒಂದು ಕೇಂದ್ರವನ್ನೂ ರಾಜಧಾನಿಯನ್ನೂ ಭೂಮಿಯ ಮೇಲೆ ಹೊಂದಿರಬೇಕಾಗಿದೆ. ಅಬ್ರಹಾಮನಿಗೆ ವಾಗ್ದಾನ ಮಾಡಿದ ದೇಶಕ್ಕಿಂತ ಸರಿಯಾದ ಸ್ಥಳವು ಬೇರಾವುದಿದೆ ?

ಪ್ಯಾಲೆಸ್ತೀನ ದೇಶವು ಪೂರ್ವಾರ್ಧಗೋಳದ ಮೂರು ಮಹಾ ಖಂಡಗಳು ಕೂಡುವಲ್ಲಿ ಇರುತ್ತದೆ. ಮಹಾ ಸಾಗರಗಳ ಯಾವ ಮಾರ್ಗದಿಂದಲೂ ಅಲ್ಲಿಗೆ ಬರಲು ಸಾಧ್ಯವಿದೆ. ವಿಶ್ವಸರ್ಕಾರಕ್ಕೆ ಅದು ಸ್ವಾಭಾವಿಕ ಕೇಂದ್ರವಾಗಿದೆ. ವ್ಯಾಪಾರಕ್ಕೂ ಮತ್ತು ನ್ಯಾಯ ನೀಡುವುದಕ್ಕೂ ಅದು ಭೂಮಿಯ ಮೇಲೆ ಒಂದು ಒಳ್ಳೆಯ ತಾಣದಲ್ಲಿದೆ. ಎಲ್ಲಕ್ಕಿಂತ ಮಿಗಿಲಾಗಿ ದೇವರ ಹಿಂದಿನ ಎಲ್ಲಾ ಕಾರ್ಯಾಚರಣೆಗಳಿಂದ ಹಿಡಿದು ಆತನ ಮಗನನ್ನು ಶಿಲುಬೆಗೇರಿಸುವವರೆಗೂ ಅಲ್ಲದೆ ಸುವಾರ್ತೆ ಹೊರಡಿಸುವುದರಲ್ಲಿಯೂ ಕೂಡ ಅದು ಸಾಕ್ಷಿಯಾಗಿದೆ. ಆತನ ಮಹಾ ಕಾರ್ಯಗಳನ್ನು ಪುನರಾರಂಭಿಸಲು ಇದಕ್ಕಿಂತ ಯುಕ್ತವಾದ ಸ್ಥಳ ಬೇರೆ ಇಲ್ಲ. ಕ್ರಿಸ್ತನು ಅವಮಾನಿತನಾದ ದೃಶ್ಯ; ಭೂಲೋಕದ ಒಡೆಯನಾಗಿ ಆತನು ಉನ್ನತಸ್ಥಾನಕ್ಕೇರಿಸುವುದಕ್ಕೆ ಅದು ಸಾಕ್ಷಿಯಾಗುವುದಕ್ಕಿಂತ ಉತ್ತಮವಾದ ಕಾರ್ಯ ಯಾವುದಿದೆ?

ಆದರೆ ವಾಗ್ದಾನಗಳಿಗಿಂತ ಇವು ಹೆಚ್ಚಲ್ಲ. ''ಚೀಯೋನಿನಿಂದ ಧರ್ಮೋಪದೇಶವೂ ಯೆರೂಸಲೇಮಿನಿಂದ ಯೆಹೋವನ ವಾಕ್ಯವೂ ಹೊರಡುವವು.'' (ಮೀಕ 4:2) ''ಯೆಹೋವನು ವಿಮೋಚಿಸಿದವರು.... ಉತ್ಸಾಹ ಧ್ವನಿಯೊಡನೆ ಚೀಯೋನಿಗೆ ಸೇರುವರು.'' (ಯೆಶಾಯ 51:11). ಯೆರೂಸಲೇಮಿನಲ್ಲಿ ಆನಂದಿಸುವರು (ಯೆಶಾಯ 66:10–13). ''ಯೆಹೋವನೇ ನಮ್ಮ ನ್ಯಾಯಾಧಿಪತಿ, ಧರ್ಮವಿಧಾಯಕ, ನಮ್ಮ ರಾಜ, ನಮ್ಮನ್ನು ರಕ್ಷಿಸುವನು'' (ಯೆಶಾಯ 33:20, 22). ಮರಣವನ್ನು ಶಾಶ್ವತವಾಗಿ ನಿರ್ನಾಮ ಮಾಡುವನು... ಎಲ್ಲರ ಕಣ್ಣೀರನ್ನು ಒರಸಿ ಬಿಡುವನು... (ಯೆಶಾಯ 25:7–8). ''ನಮಗೆ ಬಲವಾದ ಪಟ್ಟಣವಿದೆ; ಯೆಹೋವನು ತನ್ನ ರಕ್ಷಣೆಯನ್ನು ಕೋಟೆಯನ್ನಾಗಿ... ಮಾಡಿದ್ದಾನೆ.'' (ಯೆಶಾಯ 26: ). ಆಗ ಇಸ್ರಾಯೇಲ್ಯರು ಬಲಿಷ್ಠರಾಗುವರು. ಯೆಹೋವನು ಅವರ ವಿಮೋಚಕನಾಗಿರುವನು. (ಯೆಶಾಯ 59:20). ಆದಿನದಲ್ಲಿ ಯೆರೂಸಲೇಮಿಗೆ ಸಕಲ ಜನಾಂಗಗಳವರು ನೆರೆದು ಬರುವರು. ಇನ್ನು ಮೇಲೆ ತಮ್ಮ ದುಷ್ಟ ಹೃದಯದ ಹಟದಂತೆ ನಡೆಯರು'' (ಯೆರೆ 3:17).

ಅಬ್ರಹಾಮನ ಸಂತತಿಯಾದ — ಕ್ರಿಸ್ತನು ಮತ್ತು ಕ್ರಿಸ್ತನ ಭಕ್ತರ ವಿಷಯವಾಗಿ ಆತನಿಗೆ ನೆರವೇರುವ ವಾಗ್ದಾನಗಳ ಬಗ್ಗೆ ಈ ವಚನಗಳು ತಿಳಿಸುತ್ತವೆ.

**3. ಅಬ್ರಹಾಮನ ಸಂತತಿಯಾದ ಕ್ರಿಸ್ತನು ಪ್ರಪಂಚವನ್ನು ಅಧೀನ ಪಡಿಸಿ ಕೊಳ್ಳುವುದು.**

ಇದು ಅಬ್ರಹಾಮನಿಗೆ ಮಾಡಿದ ವಾಗ್ದಾನದ ಮೂರನೆಯ ರೂಪವಾಗಿದೆ. ''ನಿನ್ನ ಸಂತತಿಯು ತನ್ನ ಶತ್ರುವಿನ ಪಟ್ಟಣಗಳನ್ನು (ಹೆಬ್ಬಾಗಿಲುಗಳನ್ನು) ಸ್ವಾಧೀನಪಡಿಸಿಕೊಳ್ಳುವರು'' ಎಂಬುದಾಗಿದೆ. (ಆದಿ 22:17) (ಇಲ್ಲಿ ಭಾಷಾಂತರದ ತೊಡಕು ಸ್ವಲ್ಪ ಇದೆ. ಇಂಗ್ಲಿಷಿನಲ್ಲಿ 'ಗೇಟ್ಸ' ಎಂಬುದಾಗಿಯೂ ಹಳೇ ಕನ್ನಡ ಭಾಷಾಂತರದಲ್ಲಿ 'ಹೆಬ್ಬಾಗಿಲುಗಳನ್ನು' ಎಂದೂ ಇದೆ.)

ಪ್ರಾಚೀನ ಕಾಲದಲ್ಲಿ ಪಟ್ಟಣದ ಹೆಬ್ಬಾಗಿಲು ಆ ದೇಶದ ಅಧಿಕಾರದ ಪೀಠವಾಗಿರುತ್ತಿತ್ತು. ಅದು ಮಂತ್ರಾಲೋಚನೆ ನಡೆಸುವ, ಆಜ್ಞೆಗಳನ್ನು ಹೊರಡಿಸುವ, ನ್ಯಾಯದಾಯಿಸುವ ಹಾಗೂ ಪ್ರಜೆಗಳು ತಮ್ಮ ಮೇಲಧಿಕಾರಿಗಳಿಗೆ ರಾಜರಿಗೆ ತಮ್ಮ ಮರ್ಯಾದೆಯನ್ನು ಸಲ್ಲಿಸುತ್ತಿದ್ದ ಸ್ಥಳವಾಗಿತ್ತು. ಒಬ್ಬ ಶತ್ರುವು ಅಂತಹ ಸ್ಥಳವನ್ನು ಸ್ವಾಧೀನಪಡಿಸಿ ಕೊಳ್ಳುವುದೆಂದರೆ, ಅಲ್ಲಿಯ ಅಧಿಕಾರ — ಹೊಂದಿದವರನ್ನು ಸ್ವಾಧೀನಪಡಿಸಿಕೊಂಡು ಅವರನ್ನು ಅಧಿಕಾರ ಭ್ರಷ್ಟರನ್ನಾಗಿ ಮಾಡುವುದೆಂದರ್ಥ.

<u>ಓದುಗರಿಗೆ.</u>

ಹಿಂದಿನ ಸಂಚಿಕೆಯು ಸಕಾಲದಲ್ಲಿ ನಿಮಗೆ ತಲುಪಿದ್ದಿರಬಹುದೆಂದು ನಂಬಿರುತ್ತೇನೆ. ಈ ಸಂಚಿಕೆಯೂ ಕೂಡ ದೇವರ ಕೃಪೆಯಿಂದ ಸಕಾಲಕ್ಕೆ ಕಳುಹಿಸಲು ಸಾಧ್ಯವಾಗಿರುವುದಕ್ಕೆ ಸಂತೋಷಿಸುತ್ತೇವೆ. ಅನೇಕ ಓದುಗರು ಈ ಪತ್ರಿಕೆಯಲ್ಲಿ ಬರುವ ಸತ್ಯವೇದದ ವಿಷಯಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದಾರೆ. ದೇವರ ಕೃಪೆ ಮತ್ತು ಆಶೀರ್ವಾದದ ಬಲವೇ ಇದಕ್ಕೆ ಕಾರಣವೇ ಹೊರತು ಮನುಷ್ಯನ ಜ್ಞಾನದಿಂದಲ್ಲವೆಂದು ನಿಮಗೆ ಸ್ಪಷ್ಟಪಡಿಸುತ್ತೇನೆ. ಕೆಲವು ಮಿತ್ರರು ಬೇರೆಯವರಲ್ಲಿ ಈ ಪತ್ರಿಕೆಯನ್ನು ನೋಡಿ, ತಮಗೋಸ್ಕರ ಕಳುಹಿಸಿಕೊಡಲು ನಮಗೆ ಪತ್ರ ಬರೆದಿರುತ್ತಾರೆ. ಈ ಸಂದರ್ಭದಲ್ಲಿ ಓದುಗರಿಗೆ ಒಂದು ಕಿವಿ ಮಾತು — ಕರ್ತನಾದ ಯೇಸು ಕ್ರಿಸ್ತನ ಹಿಂದಿರುಗುವಿಕೆಯ ಕಾಲ ಸಮೀಪಿಸುತ್ತಿರುವ ಸೂಚನೆಗಳನ್ನು ಇಂದಿನ ಪ್ರಾಪಂಚಿಕ ಘಟನೆಗಳಿಂದ ತಿಳಿಯಲಾಗುತ್ತಿದೆ. ನಾವು ಎಚ್ಚರಿಕೆಯಿಂದ ಆತನ ಬರೋಣಕ್ಕೆ ಸಿದ್ಧವಾಗಿರೋಣ. ಈ ಪತ್ರಿಕೆಯನ್ನು ನೀವು ಓದಿದ ನಂತರ ಆಸಕ್ತರಾದ ಮತ್ತೊಬ್ಬರಿಗೆ ಕೊಡಿ. ಹೆಚ್ಚಿನ ಪ್ರತಿಗಳು ಬೇಕಾಗಿದ್ದಲ್ಲಿ, ನಮಗೆ ಪತ್ರ ಬರೆಯಿರಿ. ನಾವು ಉಚಿತವಾಗಿ ಕಳುಹಿಸುತ್ತೇವೆ.

ಹಿಂದಿನ ಸಂಚಿಕೆಯಲ್ಲಿ ನಾವು ಒಂದು ಕೂಪನನ್ನು ಇಟ್ಟಿದ್ದೆವು. ಅನೇಕರು ಅದನ್ನು ಭರ್ತಿ ಮಾಡಿ ನಮಗೆ ಕಳುಹಿಸಿರುವರು. ಇನ್ನೂ ಕಳುಹಿಸದೇ ಇರುವವರು ದಯವಿಟ್ಟು ಅದನ್ನು ಭರ್ತಿ ಮಾಡಿ ಕೂಡಲೇ ನಮಗೆ ಕಳುಹಿಸಬೇಕಾಗಿ ಕೋರಿದೆ.

ಭಾ. ಚಂದುದಾಸ್.

ಕ್ರಿಸ್ತನು ತನ್ನ ಶತ್ರುಗಳ ಪಟ್ಟಣಗಳ ಬಾಗಿಲನ್ನು ಸ್ವಾಧೀನಪಡಿಸಿ ಕೊಂಡಿದ್ದಾನೆಂದು
(3ನೇ ಪುಟ ನೋಡಿ.

ಸಂಪುಟ 1. ಸಂಚಿಕೆ 6 / 1982.

ಪ್ರಕಾಶಕರು:
ದಿ ಕ್ರಿಸ್ಟಡೆಲ್ಫಿಯನ್ಸ್,
23/4, ಬೆನ್ಸನ್ ರಸ್ತೆ, ಬೆಂಗಳೂರು 560046,
ಕರ್ನಾಟಕ.
(ಕರ್ನಾಟಕ, ತಮಿಳು ನಾಡು ಮತ್ತು ಕೇರಳ ರಾಜ್ಯಗಳಿಗೆ)

(... ಪ್ರತಿ ಭಾನುವಾರ ಸಂಜೆ 6:30ಕ್ಕೆ ಸತ್ಯವೇದ ಪಾಠ (...

ಇದರಿಂದ ಸ್ಪಷ್ಟವಾಗಿದೆ. ಏಕೆಂದರೆ ದೇವ ವಿರೋಧಿಗಳು ಇನ್ನೂ ಈ ಪ್ರಪಂಚವನ್ನು ಆಳುತ್ತಿದ್ದಾರೆ. ದೇವರ ರಾಜ್ಯವು ಸ್ಥಾಪಿಸಲ್ಪಡುವಾಗ ಅವರೆಲ್ಲರೂ ಬದಲಾವಣೆ ಹೊಂದುತ್ತಾರೆ. ಆಗ ದೇವರು ರೌದ್ರದಿಂದ ಜನಾಂಗಗಳಿಗೆ ಮಾತನಾಡುತ್ತಾನೆ. ಕ್ರಿಸ್ತನು ಅವರನ್ನು ಮಣ್ಣಿನ ಮಡಕೆಗಳೋ ಎಂಬಂತೆ ಒಡೆದು ಹಾಕುತ್ತಾನೆ (ಕೀರ್ತನೆ 2:9; ಪ್ರಕ 2:27). ಆದ್ದರಿಂದ ಇದು ಈಗಿನ ಇಸ್ರಾಯೇಲ್ಯರಿಗೆ ಸಂಬಂಧಿಸಿ ಹೇಳಿದಂತದಲ್ಲ. ಇದು ಒಬ್ಬ ವ್ಯಕ್ತಿಯ ಕಾರ್ಯವನ್ನು ಸೂಚಿಸುವಂತದ್ದಾಗಿದೆ. ''ಆಗ ಯೆಹೋವನು ಹೊರಟು ಯುದ್ಧ ದಿನದಲ್ಲಿ ಹೇಗೋ ಹಾಗೆಯೇ ಆ ಜನಾಂಗಗಳಿಗೆ ಪ್ರತಿಭಟಿಸುವನು''(ಜೆಕರ್ಯ 14:3) ಆ ದಿನದಲ್ಲಿ ಆತನು ಯುದ್ಧಕ್ಕೆ ಸನ್ನದ್ಧನಾಗಿ ಹೊರಟು ಬರುತ್ತಾನೆ— ಯೂದಾ ಕುಲದ ಸಿಂಹದಂತೆ ಬರುತ್ತಾನೆ, — ತನ್ನ ಶತ್ರುಗಳ ಒಕ್ಕೂಟದ ಶಕ್ತಿಯ ಮೇಲೆ ಯುದ್ಧಮಾಡಲು ಬರುತ್ತಾನೆ (ಪ್ರಕ 19:19; ಯೆಹೆ 38:21—23 ). ''ಆತನು ಭೂಲೋಕದ ರಾಜರುಗಳನ್ನು ಭೂಲೋಕದಲ್ಲಿ ದಂಡಿಸುವನು. (ಯೆಶಾಯ 24:21). ''ಆತನು ಪ್ರಭುಗಳನ್ನು ಸಿಂಹಾಸನದಿಂದ ತಳ್ಳಿ (ಬಲಿಷ್ಠರನ್ನು ಅಧಿಕಾರದಿಂದ ದೊಬ್ಬಿ ) ಸ್ಥಿತಿವಂತರನ್ನು ಬರಿಗೈಯಲ್ಲಿ ಕಳುಹಿಸುತ್ತಾನೆ. (ಲೂಕ 1:52—53). ಆಗ ಆತನು ತನ್ನ ಶತ್ರುಗಳ ಬಾಗಿಲುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಾನೆ. ದಾವೀದನು ಇದನ್ನು ಮುಂತಿಳಿಸಿ ಹೇಳುತ್ತಾನೆ — ಎಲ್ಲಾ ಅರಸರೂ ಆತನಿಗೆ ಸಾಷ್ಟಾಂಗವೆರಗುತ್ತಾರೆ, ಸರ್ವ ಜನಾಂಗಗಳೂ ಅವನನ್ನು ಸೇವಿಸುತ್ತವೆ (ಕೀರ್ತನೆ 72:11). ಪ್ರವಾದಿಯಾದ ದಾನಿಯೇಲನೂ ಕೂಡ, ''ಸಕಲ ಜನಾಂಗ ಕುಲ ಭಾಷೆಗಳವರು ಅವನನ್ನು ಸೇವಿಸುತ್ತಾರೆ'' ಎಂದು ತಿಳಿಸಿದ್ದಾನೆ (ದಾನಿ 7:14 ). ಆಗ ಪರಲೋಕದಲ್ಲಿ ಮಹಾ ಶಬ್ದವುಂಟಾಗಿ —''ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ, ಆತನು ಅಭಿಷೇಕಿಸಿದವನಿಗೂ (ಕ್ರಿಸ್ತನಿಗೂ) ಉಂಟಾಯಿತು. ಆತನು ಯುಗ ಯುಗಾಂತರಗಳಲ್ಲಿಯೂ ರಾಜ್ಯವನ್ನಾಳುವನು (ಪ್ರಕ 11:15).

### 4. ಎಲ್ಲಾ ಜನಾಂಗಗಳವರೂ ಅಬ್ರಹಾಮನು ಮತ್ತು ಅವನ ಸಂತತಿಯಲ್ಲಿ ಆಶೀರ್ವಾದ ಹೊಂದುವರು.

ಒಂದೇ ವಾಕ್ಯದಲ್ಲಿ ಇದು ಸುವಾರ್ತೆಯಾಗಿದೆಯೆಂದು ಶ್ರೀ ಪೌಲನು ತಿಳಿಸುತ್ತಾನೆ. ಶ್ರೀ ಪೌಲನು ಗಲಾತ್ಯದವರಿಗೆ ಬರೆಯುತ್ತಾ, ''ನಂಬಿಕೆಯ ನಿಮಿತ್ತವಾಗಿಯೇ ನೀತಿವಂತರೆಂದು ನಿರ್ಣಯಿಸಲ್ಪಡುತ್ತಾರೆಂದು'' ತಿಳಿಸುತ್ತಾನೆ (ಗಲಾತ್ಯ 3:8). ಯೇಸುಕ್ರಿಸ್ತನು ಮತ್ತು ಆತನ ಶಿಷ್ಯರು ಬೋಧಿಸಿದ ಸಾರಾಂಶವನ್ನು ನಾವು ಗಮನಿಸಬೇಕು. ದೇವರ ರಾಜ್ಯವನ್ನೂ ಯೇಸುಕ್ರಿಸ್ತನ ಹೆಸರನ್ನೂ ಅವರು ಬೋಧಿಸಿದರು. ಅಬ್ರಹಾಮನಿಗೆ ಪ್ರಕಟಿಸಿದಂತಾದ್ದು ಈ ವಿಷಯಗಳನ್ನು ಒಂದೇ ವಾಕ್ಯದಲ್ಲಿ ಸೇರಿಸಿ ಹೇಳಿದಂತಾದ್ದೇ ಆಗಿದೆ. ಅಬ್ರಹಾಮನು ಮತ್ತು ಕ್ರಿಸ್ತನ ಮುಖಾಂತರ ಸಾರ್ವತ್ರಿಕ ಆಶೀರ್ವಾದದ ಬಗ್ಗೆ ಅದು ಹೇಳಿದೆ. ಆದರೆ ಇದು ಪ್ರಥಮವಾಗಿ ವೈಯಕ್ತಿಕ ಹಾಗೂ ನಂತರ ಜನಾಂಗಗಳಿಗೆ ಸಂಬಂಧಿಸಿದಂತೆ ಆಶೀರ್ವಾದವು ಯಾವ ರೀತಿಯಲ್ಲಿ ನಡೆಸಲ್ಪಡುತ್ತದೆಂಬ ರೀತಿಯನ್ನು ತಿಳಿಸುತ್ತದೆ. ಇದರಿಂದ ಅದು ಇನ್ನೂ ನೆರವೇರಿಲ್ಲವೆಂಬ ಅಂಶ ಸ್ಪಷ್ಟವಾಗಿದೆ. ಏಕೆಂದರೆ ಜನಾಂಗಗಳು ಆಶೀರ್ವಾದ ಹೊಂದಿದ ಸ್ಥಿತಿಯಲ್ಲಿಲ್ಲ. ಅವರು ದುರಾಡಳಿತದಿಂದ ನರಳುತ್ತಿರುವುದಲ್ಲದೆ, ಬಡತನ, ಅಜ್ಞಾನ ಮತ್ತು ಸಂಕಟಗಳಲ್ಲಿ ತೊಳಲಾಡುತ್ತಿದ್ದಾರೆ. ಇದು ಆಶೀರ್ವಾದಕ್ಕೆ ವ್ಯತಿರಿಕ್ತವಾದ ಸ್ಥಿತಿಯಾಗಿದೆ. ಪ್ರಪಂಚವು ದುಷ್ಟತನದಲ್ಲಿ ಬಿದ್ದಿದೆ. ಅಬ್ರಹಾಮನಾಗಲೀ ಆತನ ಸಂತತಿಯಾಗಲೀ ಈ ಪ್ರಪಂಚದ ಬಹು ಜನರಿಗೆ ತಿಳಿದಿಲ್ಲ. ದ್ರವ್ಯ ಸಂಪತ್ತಿನಿಂದ ಕೂಡಿ, ಪ್ರಾಪಂಚಿಕ ಸಂಭ್ರಮಗಳಲ್ಲಿ ಮುಳುಗಿರುವ ಅನೇಕ ಪಾಶ್ಚಾತ್ಯ ದೇಶಗಳಲ್ಲಿಯೂ (ಇಂಗ್ಲೆಂಡ್, ಅಮೇರಿಕ ಮುಂತಾದವು ) ಕೂಡ ಅವಿಶ್ವಾಸ, ಕೆಟ್ಟ ಚಾಳಿಗಳು ಕುಟುಂಬಗಳಲ್ಲಿ ಒಡಕು, ತಂದೆತಾಯಿ, ಗುರುಹಿರಿಯರಲ್ಲಿ ಅವಿಧೇಯತೆ, ಅಗೌರವ ತೋರಿಸುವುದು, ಇತ್ಯಾದಿ ದಿನ ನಿತ್ಯದ ನಡವಳಿಕೆಗಳಾಗಿವೆ. ದೇವರ ಬಗ್ಗೆ ಭಯವಾಗಲೀ, ಆತನ ವಾಕ್ಯದ ಬಗ್ಗೆ ಪ್ರೀತಿಯಾಗಲೀ ಕಾಣುವುದಿಲ್ಲ. ಮನುಷ್ಯ ಮನುಷ್ಯನಿಗೆ ಹೆದರುವುದು ಪ್ರಪಂಚವನ್ನು ಹೆಚ್ಚಾಗಿ ಪ್ರೀತಿಸುವುದು ಅವೇ ಹೆಚ್ಚಾಗಿವೆ.

ಎಲ್ಲಾ ಜನಾಂಗಗಳೂ ಅಬ್ರಹಾಮನು ಮತ್ತು ಆತನ ಸಂತತಿಯಲ್ಲಿ ಇನ್ನೂ ಆಶೀರ್ವದಿಸಲ್ಪಟ್ಟಿಲ್ಲ. ಆದರೆ ಮುಂದೆ ಅವರು ಆಶೀರ್ವದಿಸಲ್ಪಡುವರು. ''ಇಗೋ, ಒಬ್ಬ ರಾಜನು ನೀತಿಗನುಸಾರವಾಗಿ ಆಳುವನು. ಅಧಿಪತಿಗಳು ನ್ಯಾಯದಿಂದ ದೊರೆತನ ಮಾಡುವರು... ಆಗ ನೋಡುವವರ ಕಣ್ಣು ಮೊಬ್ಬಾಗದು, ಕೇಳುವವರ ಕಿವಿ ಮಂದವಾಗದು....'' (ಯೆಶಾಯ 32: 1, 3,4). ಆ ದಿನದಲ್ಲಿ ಕಿವುಡರು ಮಾತನ್ನು ಕೇಳುವರು, ಮೊಬ್ಬು ಕತ್ತಲಲ್ಲಿಯೂ ಕುರುಡರ ಕಣ್ಣು ಕಾಣುವವು. (ಯೆಶಾಯ 29:18,20 ). ಆ ದಿನದಲ್ಲಿ ದೇವರು ಮುಯ್ಯಿ ತೀರಿಸಲು ಬರುತ್ತಾನೆ. ಮೂಕನು ಹಾಡುತ್ತಾನೆ. ಕುಂಟನು ಜಿಂಕೆಯಂತೆ ಹಾರುತ್ತಾನೆ (ಯೆಶಾಯ 35: 4, 6). ಪೂರ್ವದಿಂದ ಪಶ್ಚಿಮದವರೆಗೂ ಯೆಹೋವನ ನಾಮವು ಅನ್ಯ ಜನಾಂಗಗಳಲ್ಲಿ ಘನವಾಗಿದೆ. (ಮಲಾಕಿಯ 1:11). ಆತನ ಆಳ್ವಿಕೆಯು ಸಮುದ್ರದಿಂದ ಸಮುದ್ರದವರೆಗೂ ಇರುವದು. ಆತನು ಕೊಡುವ ಅಪ್ಪಣೆಯು ಸಮಾಧಾನಕರವಾಗಿರುವದು (ಜೆಕರ್ಯ 9:10). ಬಹು ದೇಶಗಳವರೂ ಬಲವಾದ ಜನಾಂಗಗಳವರೂ ಯೆಹೋವನನ್ನು ಆಶ್ರಯಿಸುವದಕ್ಕೂ ಬೇಡುವದಕ್ಕೂ ಬರುವರು (ಜೆಕರ್ಯ 8:22; 2:11). ಭೂಮಿಯಲ್ಲೆಲ್ಲಾ ಯೆಹೋವನ ಮಹಿಮೆಯೆಂಬ ಜ್ಞಾನ ತುಂಬಿರುವದು (ಹಬ 2:14). ಎಲ್ಲಾ ಜನಾಂಗಗಳವರೂ ಅವನಲ್ಲಿ ಆಶೀರ್ವಾದ ಹೊಂದುವರು (ಕೀರ್ತನೆ 72:5—7,12—14,17).

(ಮುಗಿಯಿತು.

## ಮೂಲ ನಂಬಿಕೆಗಳು
## (ಹಿಂದಿನ ಸಂಚಿಕೆಯಿಂದ)

5. ದೇವರಿಗೂ ಇತರೆ ಮಾನವರಿಗೂ ಇಲ್ಲದಿರುವಂತಹ ಒಂದು ಸಂಬಂಧವು ಯೇಸುಕ್ರಿಸ್ತನ ಮತ್ತು ತಂದೆಯ ನಡುವೆ ಇದ್ದಿತೇ?

ಹೌದು. ಆತ್ಮೀಯವಾಗಿ ಯೇಸುಕ್ರಿಸ್ತನು ಮತ್ತು ತಂದೆಯು ಒಂದಾಗಿದ್ದರು. ಹೀಗೆ ದೇವರು ಕ್ರಿಸ್ತನಲ್ಲಿದ್ದನು ಮತ್ತು ಕ್ರಿಸ್ತನು ದೇವರ ಪ್ರತ್ಯಕ್ಷತೆಯಾಗಿದ್ದನು. ಈ ವಿಷಯಗಳನ್ನು ಮತ್ತಾವ ಮನುಷ್ಯನ ಬಗ್ಗೆಯೂ ಹೇಳಲಾಗುವುದಿಲ್ಲ.

ಯೋಹಾನ 10:30; 14:9—10; 2 ಕೊರಿಂಥ 5:19; 1 ತಿಮೋಥೆ 3:16.

6. ತ್ರಯೈಕತ್ವವಾದವರು ಬೋಧಿಸುವ ರೀತಿಯಲ್ಲಿ ಯೇಸುವು ತಂದೆಯೊಂದಿಗೆ ಸಹ-ಸಮಾನನೂ ಸಹ-ನಿರಂತರನೂ ಆದ ದೇವರಾಗಿದ್ದನೋ?

ಮೇಲಿನ ಉತ್ತರದಲ್ಲಿ ಕ್ರಿಸ್ತಯೇಸುವು ತಂದೆಯೊಂದಿಗೆ ಒಂದೇ ಆಗಿದ್ದಾನೆಂದು ಹೇಳಿರುವಲ್ಲಿ; ಆ ಮನುಷ್ಯನಾದ ಕ್ರಿಸ್ತನು ತಂದೆಯಿಂದ ಹುಟ್ಟಿದವನೂ, ಆತನ ಶಕ್ತಿಯನ್ನು ಅಳತೆಯಿಲ್ಲದಂತೆ ಹೊಂದಿದವನೂ ಆಗಿದ್ದು ತಂದೆಯಿಂದ ಪ್ರತ್ಯೇಕವಾಗಿದ್ದಾನೆ. ಆದರೆ ಆತನು ಸಹ-ಸಮಾನನೂ ಮತ್ತು ಸಹ-ನಿರಂತರನೂ ಎಂಬ ಅಭಿಪ್ರಾಯಗಳು 3ನೆಯ ಮತ್ತು 4ನೆಯ ಶತಮಾನಗಳಲ್ಲಿ ಸಭೆಯ ಮತಾಧಿಕಾರಿಗಳ ಒಂದು ಊಹಾಪೋಹ ಹಾಗೂ ವಿವಾದದಿಂದ ಹುಟ್ಟಿದಂತಾದ್ದು. ಅವು ಹೊಸ ಒಡಂಬಡಿಕೆಯ ಕ್ರಿಸ್ತನ ವಿಷಯವಾದ ಸಿದ್ಧಾಂತಕ್ಕೆ ಸೇರಿದುದಲ್ಲ. ಈ ಪದ್ಧತಿಯು ತನ್ನ ಆತ್ಮ (ಶಕ್ತಿಯಿಂದ)ದಿಂದ ಪರಲೋಕ ಭೂಲೋಕಗಳನ್ನು ತುಂಬಿರುವ ತಂದೆಯೇ ಕ್ರಿಸ್ತನ ದೇವರಾಗಿದ್ದಾನೆಂದು ಬೋಧಿಸುತ್ತದೆ. ಕ್ರಿಸ್ತನು ತಂದೆಯೊಂದಿಗೆ ಸಹ-ಸಮಾನತ್ವವನ್ನು ನಿರಾಕರಿಸಿದ್ದನು ಮತ್ತು ಒಬ್ಬ ಮಗನಲ್ಲಿ ಸಹ-ನಿರಂತರತ್ವವು ಅಸಾಧ್ಯವಾದುದು.

ಮೇಲಿನ 1 ರಿಂದ 5ರವರೆಗೆ ಕೊಟ್ಟಿರುವ ಉತ್ತರ/ವಚನಗಳೊಂದಿಗೆ ಈ ವಚನಗಳನ್ನೂ ನೋಡಿ.

ಯೋಹಾನ 8:18; 14:11; 14:28; 1 ಕೊರಿಂಥ 11:3; 15:28.

## ಯೇಸು ಕ್ರಿಸ್ತನ ಹೆಸರನ್ನು ಕುರಿತದ್ದು.

1. ಯೇಸುಕ್ರಿಸ್ತನು ಆ ಹೆಸರಿನಿಂದ ಏಕೆ ಕರೆಯಲ್ಪಟ್ಟನು?

ಆತನು ಯಾರೆಂಬುದಾಗಿಯೂ ಮತ್ತು ಆತನ ಉದ್ದಿಷ್ಟ ಕಾರ್ಯವೇನೆಂಬುದನ್ನು ತಿಳಿಯಲಿಕ್ಕಾಗಿ. ಮತ್ತಾಯ 1:21.

2. ಯಾವ ರೀತಿಯಲ್ಲಿ ಆತನ ಹೆಸರು ಇದನ್ನು ತೋರಿಸುತ್ತದೆ ?

ಮೊದಲನೆಯದಾಗಿ ಇಬ್ರಿಯ ಭಾಷೆಯ ಮೂಲದ 'ಯೇಸು' ಎಂಬ ಹೆಸರಿನ ಪದವು 'ದೇವರು ರಕ್ಷಿಸುತ್ತಾನೆ' ಎಂಬುದಾಗಿಯೂ, ನಂತರ ಗ್ರೀಕ್ ಪದವಾದ 'ಕ್ರಿಸ್ತನು' ಎಂದರೆ 'ಅಭಿಷಕ್ತನು' ಎಂದರ್ಥ.

ಮತ್ತಾಯ 1:23; ಕೀರ್ತನೆ 2:2; ಅ.ಕೃ. 4:27.

3. ಅಭಿಷೇಕಿಸಲ್ಪಡುವುದೆಂದರೇನು?

ಅದು ದೈವಿಕ ಸೇವಕದಿಂದ ರಾಜರುಗಳು ಮತ್ತು ಯಾಜಕರುಗಳು ತಮ್ಮ ಸ್ಥಾನಕ್ಕೆ ಪ್ರತಿಷ್ಠೆಪಡಿಸಿಕೊಳ್ಳುವ ಆಚರಣೆಯಾಗಿದೆ. ಅವರ ತಲೆಯ ಮೇಲೆ ಎಣ್ಣೆಯನ್ನು ಹಾಕಿ ಅಭಿಷೇಕಿಸಲ್ಪಡುತ್ತಿದ್ದರು.

ಧ.ಕಾ.29:7—9; 1 ಸಮು 9:16; 10:1; 16:1.

4. ಕ್ರಿಸ್ತನು ಎಣ್ಣೆಯಿಂದ ಅಭಿಷೇಕಿಸಲ್ಪಟ್ಟನೋ ?

ಇಲ್ಲ. ಆತನು ಪ್ರಾಚೀನ ಪದ್ಧತಿಯಂತೆ ಎಣ್ಣೆಯಿಂದ ಅಭಿಷೇಕಿಸಲ್ಪಡುವ ಹಾಗೆಯೇ ಅಭಿಷೇಕಿಸಲ್ಪಟ್ಟನು. ಯೋರ್ದಾನಿನಲ್ಲಿ ಆತನ ದೀಕ್ಷಾಸ್ನಾನದ ಸಮಯದಲ್ಲಿ ಆತನು ದೇವರ ಆತ್ಮದಿಂದ ಅಭಿಷೇಕಿಸಲ್ಪಟ್ಟನು.

> ಕಷ್ಟದ ದಿನಗಳೂ ಸಂತೋಷವಿಲ್ಲವೆಂದು ನೀನು ಹೇಳುವ ವರುಷಗಳೂ ಸಮೀಪಿಸುವದರೊಳಗಾಗಿ ಯೌವನದಲ್ಲಿಯೇ ನಿನ್ನ ಸೃಷ್ಟಿಕರ್ತನನ್ನು ಸ್ಮರಿಸು. — ಪ್ರಸಂಗಿ 12:1.

5. ದೇವರು ತನ್ನ ಆತ್ಮದಿಂದ ಅಭಿಷೇಕಿಸಲ್ಪಟ್ಟ ಯೇಸುಕ್ರಿಸ್ತನೆಂಬ ಹೆಸರಿನ ಒಬ್ಬ ಮನುಷ್ಯನನ್ನು ಬೆಟ್ಟುಮಾಡಿ ತೋರಿಸಿ, ಆತನಿಂದಲೇ ರಕ್ಷಣೆಯಾಗುವದೆಂದು ಹೇಳುವರು — ಯಾವುದರಿಂದ ರಕ್ಷಣೆ?

ತಮ್ಮ ಪಾಪಗಳಿಂದ. ಮತ್ತಾಯ 1:21; ಅ.ಕೃ. 4:12; 10:43; ಯೋಹಾನ 1:29.

## ಯೇಸು ಕ್ರಿಸ್ತನ ಮರಣವನ್ನು ಕುರಿತದ್ದು.

1. ಯಾವ ರೀತಿಯಿಂದ ಮಾನವರನ್ನು ತಮ್ಮ ಪಾಪಗಳಿಂದ ದೇವರು ಕ್ರಿಸ್ತನ ಮೂಲಕ ರಕ್ಷಿಸುವನು?

ಆತನು ಕ್ರಿಸ್ತನಿಗಾಗಿಯೂ ಮತ್ತು ಆತನ ಬೋಧನೆಯ ಶಕ್ತಿಯಿಂದಲೂ ಅವರನ್ನು ಕ್ಷಮಿಸುತ್ತಾನೆ. ಆತನು ಮಾನವರನ್ನು ತಮ್ಮ ಪಾಪಗಳಿಂದ ತಿರುಗಿಸಿ, ಅವರನ್ನು ನೀತಿಯ ಕಡೆಗೆ ನಡೆಸುತ್ತಾನೆ.

ಎಫೆಸ 4:32; ಕೊಲೊಸ್ಸೆ 1:14; 1 ಯೋಹಾನ 2:12; ಅ.ಕೃ. 3:26.

2. ಕ್ರಿಸ್ತನಿಗಾಗಿ ಏಕೆ ದೇವರು ಕ್ಷಮಿಸಬೇಕು?

ಏನು ಆತನಲ್ಲಿ ಪೂರೈಸಿತೋ ಅದಕ್ಕಾಗಿ. ಯೆಶಾಯ 53:12.

3. ಕ್ರಿಸ್ತನಲ್ಲಿ ಏನು ಪೂರೈಕೆಯಾಯಿತು?

ಶಿಲುಬೆಯ ಮೇಲೆ ಆತನ ಮರಣದಲ್ಲಿ ಪಾಪವು ದಂಡಿಸಲ್ಪಟ್ಟಿತು ಮತ್ತು ಆತನ ರಕ್ತವು ಚೆಲ್ಲಲ್ಪಟ್ಟಿದರಲ್ಲಿ ದೇವರ ನೀತಿಯು ಪ್ರಪಂಚಕ್ಕೆಲ್ಲಾ ಪ್ರಕಟಿಸಲ್ಪಟ್ಟಿತು.

ರೋಮಾ 6:10; 1 ಪೇತ್ರ 2:24; ರೋಮಾ 8:3; 3:25, 26.

(ಮುಂದುವರೆಯುವುದು.

> ಸತ್ಯವಂತನ ರಾಜಮಾರ್ಗ ಹಾನಿಗೆ ದೂರ; ತನ್ನ ನಡತೆಯನ್ನು ಗಮನಿಸುವವನು ತನ್ನ ಆತ್ಮವನ್ನು ಕಾಯುವವನು —ಜ್ಞಾ 16:17.

> ಬಂಗಾರಕ್ಕಿಂತಲೂ ಜ್ಞಾನವನ್ನು ಪಡೆಯುವುದು ವಿಶೇಷ ಮೇಲು; ಬೆಳ್ಳಿಗಿಂತಲೂ ವಿವೇಕವನ್ನು ಹೊಂದುವುದು ಲೇಸು. ಜ್ಞಾ.16:16.

ನಮ್ಮಲ್ಲಿ ದೊರೆಯುವ ಉಚಿತ ಕರಪತ್ರ/ಕಿರುಹೊತ್ತಗೆಗಳಿಗೆ ಇಂದೇ ಬರೆಯಿರಿ:—

- ನೀವು ತಿಳಿಯಲೇ ಬೇಕಾದ ಏಳು ಸಂಗತಿಗಳು.
- ಕರ್ತನು ಹೀಗೆ ಹೇಳುತ್ತಾನೆ.
- ದೈನಂದಿನ ಸತ್ಯವೇದ ಪಠಣ ತಃಖ್ತೆ.
- ಸತ್ಯದಲ್ಲಿ ಜೀವಿಸುವದು.
- ಮೂಲ ಸುವಾರ್ತೆ
- ಲೂಸಿಫರನು ಯಾರು ?
- ಸೈತಾನನು ಸಂಪ್ರದಾಯಗೋ ಅಥವಾ ಸತ್ಯವೇದಗೋ?

ಅಲ್ಲದೆ ಇತರೆ ಭಾಷೆಗಳಲ್ಲಿಯೂ ಕೆಲವು ಕರಪತ್ರ/ಕಿರುಹೊತ್ತಗೆಗಳು ಉಚಿತವಾಗಿ ದೊರೆಯುತ್ತವೆ.
ಸ್ಥಳೀಯ ವಿಳಾಸಗಳು:—

ದಿ ಕ್ರಿಸ್ಟಡೆಲ್ಫಿಯನ್ಸ,

ಕೇರ್ ಆಫ್ ಸಿಟಿ ಡ್ರಗ ಹೌಸ,
ರಾಜೇಂದ್ರ ಪ್ರಸಾದ ರಸ್ತೆ,
ಮಂಡ್ಯ 571 401 ಕರ್ನಾಟಕ

ಜಿ. ಪಿ.ಓ. ಬಾಕ್ಸ 159,
ಹೈದರಾಬಾದ 500 001,
ಆಂಧ್ರ ಪ್ರದೇಶ.